ಕರ್ನಾಟಕ ವಿಧಾನ ಪರಿಷತ್

ಮಾನ್ಯ ಸದಸ್ಯರ ಹೆಸರು	:	ಶ್ರೀ ಶ್ರೀಕಂಠೇಗೌಡ (ಪದವೀದರರ ಕ್ಷೇತ್ರ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**279**
ಉತ್ತರಿಸಬೇಕಾದ ದಿನಾಂಕ	:	09.12.2020
ಉತ್ತರಿಸಬೇಕಾದ ಸಚಿವರು	:	ವಸತಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ಕಳೆದ ಮೂರು ವರ್ಷಗಳಲ್ಲಿ ವಿವಿಧ ವಸತಿ ಯೋಜನೆಗಳಲ್ಲಿ ಮಂಜೂರಾದ ಮನೆಗಳ ಸಂಖ್ಯೆ ಎಷ್ಟು; ಅರ್ಹ ಫಲಾನುಭವಿಗಳ ಸಂಖ್ಯೆ ಎಷ್ಟು; (ಯೋಜನೆ ವಾರು ಫಲಾನುಭವಿಗಳ ಹೆಸರು ವಾರು ವಿವರ ನೀಡುವುದು)	ಕಳೆದ ಮೂರು ವರ್ಷಗಳಲ್ಲಿ ಅಂದರೆ 2017-18 ರಿಂದ 2019-20 ರವರೆಗೆ ವಿವಿಧ ವಸತಿ ಯೋಜನೆಗಳಡಿಯಲ್ಲಿ ರಾಜ್ಯಾದ್ಯಂತ 729705 ಅರ್ಹ ಫಲಾನುಭವಿಗಳು ಆಯ್ಕೆಯಾಗಿದ್ದು, ಸದರಿಯವರಿಗೆ ಮನೆಗಳು ಮಂಜೂರಾಗಿರುತ್ತವೆ. ಮಂಜೂರಾದ ಮನೆಗಳಲ್ಲಿ 283575 ಮನೆಗಳು ಪೂರ್ಣಗೊಂಡಿದ್ದು, 257955 ಮನೆಗಳು ವಿವಿಧ ಹಂತದ ಪ್ರಗತಿಯಲ್ಲಿರುತ್ತವೆ. ಯೋಜನಾವಾರು, ಫಲಾನುಭವಿವಾರು ವಿವರವನ್ನು ಅನುಬಂಧ '1' ರಲ್ಲಿ ಲಗತ್ತಿಸಿದೆ.
(ಆ)	ಇದರಲ್ಲಿ ಪೂರ್ಣಗೊಂಡ ಮನೆಗಳೆಷ್ಟು; ಅಪೂರ್ಣಗೊಂಡ ಮನೆಗಳೆಷ್ಟು (ವಿವರ ನೀಡುವುದು)	
(ಇ)	ಕಾಮಗಾರಿ ಪೂರ್ಣಗೊಂಡಿದ್ದರೂ ಕಳೆದ 8 (ಎಂಟು) ತಿಂಗಳಿಂದ ಫಲಾನುಭವಿಗಳಿಗೆ ಅನುದಾನ ಬಿಡುಗಡೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ವಿವಿಧ ವಸತಿ ಯೋಜನೆಗಳನ್ನು ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ರಾಜೀವ್ ಗಾಂಧಿ ವಸತಿ ನಿಗಮವು ಅನುಷ್ಠಾನಗೊಳಿಸುತ್ತಿದೆ. ವಸತಿ ಯೋಜನೆಗಳಡಿ ಫಲಾನುಭವಿಗಳು ನಿರ್ಮಿಸಿಕೊಂಡಿರುವ ಮನೆಗಳನ್ನು ನಿಗಮವು ಅಭಿವೃದ್ಧಿ ಪಡಿಸಿರುವ "ಇಂದಿರಾ ಮನೆ" ಆ್ಯಪ್ ಮೂಲಕ ಜಿ.ಪಿ.ಎಸ್ ಆಧಾರಿತ ಛಾಯಚಿತ್ರಗಳನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿ/ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಫಲಾನುಭವಿಯಿಂದ ಪಡೆದು ಪಂಚಾಯತಿ ಅಭಿವೃದ್ಧಿ ಅಧಿಕಾರಿ/ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳ ದೃಢೀಕರಣದ ಆಧಾರದ ಮೇಲೆ ಫಲಾನುಭವಿಗಳ ಆಧಾರ್ ಆಧಾರಿತ ಬ್ಯಾಂಕ್ ಖಾತೆಗೆ ಅನುದಾನವನ್ನು ನೇರವಾಗಿ ಬಿಡುಗಡೆಗೊಳಿಸಲಾಗುತ್ತಿತ್ತು. ಈ ನಡುವೆ ರಾಜ್ಯದ ವಿವಿಧ ಕಡೆಗಳಲ್ಲಿ ವಿವಿಧ ವಸತಿ ಯೋಜನೆಗಳಡಿ ಆಯ್ಕೆಯಾದ ಫಲಾನುಭವಿಗಳು ಮನೆಗಳನ್ನು ನಿರ್ಮಿಸದೇ ಹಣ ಪಡೆದಿರುವ ಬಗ್ಗೆ ಬಂದಂತಹ ದೂರು ಹಿನ್ನಲೆಯಲ್ಲಿ ಅನುದಾನ ದುರ್ಬಳಕೆಯನ್ನು ತಡೆಹಿಡಿಯುವ ಉದ್ದೇಶದಿಂದ ಹಾಗೂ ಸಾರ್ವಜನಿಕ ಹಣ ಪೋಲಾಗದಂತೆ ತಪ್ಪಿಸಲು ಸರ್ಕಾರವು ದಿನಾಂಕ: 16.11.2019 ರಂದು ಆದೇಶ ಹೊರಡಿಸಿ ಈಗಾಗಲೇ ಪ್ರಗತಿಯಲ್ಲಿರುವ ಹಾಗೂ ಅನುದಾನ ಬಿಡುಗಡೆಗೆ ಬೇಡಿಕೆ ಇರುವ ಮನೆಗಳನ್ನು Geo ಆಧಾರಿತ Vigil App ಮೂಲಕ ಪರಿಶೀಲಿಸಲು ಗ್ರಾಮೀಣ ಪ್ರದೇಶದಲ್ಲಿ ಜಿಲ್ಲಾ ಪಂಚಾಯ್ತಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಹಾಗೂ ನಗರ ಪ್ರದೇಶದಲ್ಲಿ
ಈ)	ಹಾಗಿದ್ದಲ್ಲಿ, ಶೀಘ್ರವಾಗಿ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು ?	

		ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಪರಿಶೀಲನಾ ಸಮಿತಿ ರಚಿಸಲಾಗಿರುತ್ತದೆ. ಅದರಂತೆ ಸದರಿ ಸಮಿತಿಯು 3.41 ಲಕ್ಷ ಮನೆಗಳ ಪೈಕಿ 294383 ಮನೆಗಳನ್ನು Vigil App ಮೂಲಕ ಜಿ.ಪಿ.ಎಸ್ ಗೆ ಅಳವಡಿಸಲಾಗಿದ್ದು, ಡಿಸಿ/ಸಿಇಒ ಹಂತದಲ್ಲಿ 2,39,237 ಫಲಾನುಭವಿಗಳ ವಿವರಗಳನ್ನು ಅನುಮೋದಿಸ ಲಾಗಿರುತ್ತದೆ. ಅನುಷ್ಠಾನಾಧಿಕಾರಿಗಳು ಪರಿಶೀಲನೆಯ ಸಮಯದಲ್ಲಿ ವಿವಿಧ ಕಾರಣಗಳಿಂದ ವಿವಿಧ ಲಾಗಿನ್ ಗಳಲ್ಲಿ ಬಾಕಿ ಇರುವ ಒಟ್ಟು 7,130 ಫಲಾನುಭವಿಗಳನ್ನು ಜಿಲ್ಲಾ ಮಟ್ಟದ ಅನುಷ್ಠಾನಾಧಿಕಾರಿಗಳು ಮತ್ತೊಮ್ಮೆ ಪರಿಶೀಲಿಸಿ ದೃಢೀಕರಿಸಿದ ದಾಖಲೆಗಳೊಂದಿಗೆ ವರದಿಯನ್ನು ನಿಗಮಕ್ಕೆ ಸಲ್ಲಿಸಿದ ಕೂಡಲೇ ಅದನ್ನು ಪರಿಶೀಲಿಸಿ ಶೀಘ್ರವಾಗಿ ಅನುದಾನ ಬಿಡುಗಡೆಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಜಿಲ್ಲಾಧಿಕಾರಿಗಳು/ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ ಗಳ ಹಂತದಲ್ಲಿ ಅನುಮೋದಿಸಿರುವ ಒಟ್ಟು 2,39,237 ಫಲಾನುಭವಿಗಳ ಪೈಕಿ 2,06,582 ಫಲಾನುಭವಿಗಳಿಗೆ "ವಿಜಿಲ್-ಆ್ಯಪ್" (Vigil App) ಮುಖಾಂತರ ಪರಿಶೀಲಿಸಿ ಅರ್ಹಗೊಂಡ ಫಲಾನುಭವಿಗಳಿಗೆ ಅವರ ಬ್ಯಾಂಕ್ ಖಾತೆಗೆ ನೇರವಾಗಿ ರೂ. 1121.93 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಇನ್ನುಳಿದ ಫಲಾನುಭವಿಗಳ ಪರಿಶೀಲನಾ ಕಾರ್ಯ ಪ್ರಗತಿಯಲ್ಲಿದ್ದು, ತ್ವರಿತವಾಗಿ ಅನುದಾನ ಬಿಡುಗಡೆಗೆ ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಸಂ :ವಇ 407 ಹೆಚ್‌ಎಎಂ 2020

(ವಿ.ಸೋಮಣ್ಣ)
ವಸತಿ ಸಚಿವರು